## ಪಾಠ 21

## ಸಭೆ:

# ಅದರ ಹಣಕಾಸು

**ನಾವು ಯಾಕೆ ಕೊಡಬೇಕು**

1. **ಯಾರಿಂದ ಎಲ್ಲಾ ಆಶೀರ್ವಾದಗಳು ಬರುವವು (ಯಾಕೋಬ 1:17)?**
2. **ಎಲ್ಲಾ ಸಂಗತಿಗಳನ್ನು ಹೊಂದಿಕೊಂಡಿರುವಾತನು ಯಾರು (1 ಪೂರ್ವಕಾಲವೃತ್ತಾಂತ 29:11, 12)?**
3. **ಪ್ರತಿಯೊಬ್ಬ ಕ್ರೈಸ್ತನು ಏನಾಗಿದ್ದಾನೆ? ಅವನಿಂದ ಏನು ಕೇಳಲ್ಪಡುತ್ತದೆ (1 ಕೊರಿಂಥ 4:1, 2; 1 ಪೇತ್ರ 4:10)?**
4. **ಎಲ್ಲರಿಗೆ ಆಜ್ಞೆಯು ಯಾವುದು (ಮತ್ತಾಯ 5:42; ಲೂಕ 6:30)? ಪ್ರತಿಯೊಬ್ಬರು ಯಾಕೆ ಕೆಲಸ ಮಾಡಬೇಕು (ಎಫೆಸ 4:28)?**

**ಯಾರು ಕೊಡಬೇಕು**

1. **ಕೊಡಲು ಪೌಲನು ಯಾರಿಗೆ ಆಜ್ಞಾಪಿಸಿದನು (1 ಕೊರಿಂಥ 16:2)?**
   a. "ನಿಮ್ಮಲ್ಲಿ ಪ್ರತಿಯೊಬ್ಬರು" ಎಂಬುದರ ಒತ್ತಡ ಯಾವುದು? ಪ್ರತಿಯೊಬ್ಬ ಕ್ರೈಸ್ತನು - ಪುರುಷನು, ಸ್ತ್ರೀ, ಬಾಲಕ, ಬಾಲಕಿ - ಕೊಡತಕ್ಕದ್ದೋ?
   b. ಮಕ್ಕಳಿಗಾಗಿ ತಂದೆತಾಯಿಗಳು ಕೊಡಬೇಕೋ? ಅವರು ಅವರಿಗಾಗಿ ಕೊಟ್ಟರೆ, ಅವರಿಗಾಗಿ ಅವರು ಬಾಪ್ತಿಸ್ಮ ಹೊಂದಬಾರದೋ? ಅವರಿಗಾಗಿ, ಕರ್ತನ ಬೋಜನವನ್ನು ಸಹ ತೆಗೆದುಕೊಳ್ಳಬಾರದೋ? ಅವರ ಪ್ರಾರ್ಥನೆಯನ್ನು ಮತ್ತು ಹಾಡುವದನ್ನು ಅವರು ಮಾಡಬಾರದೋ?

**ಎಲ್ಲರೂ ಹೇಗೆ ಕೊಡಬೇಕು**

1. **ಒಬ್ಬನ ಕೊಡುವಿಕೆಯ ಮಿತಿಗಳನ್ನು ಯಾವುದು ಗುರುತಿಸಬೇಕು (1 ಕೊರಿಂಥ 16:2)?**
2. **ಯೂದಾಯದಲ್ಲಿಯ ದೇವಜನರಿಗೆ ಸಹಾಯ ಮಾಡಲು ಅಂತಿಯೋಕ ಸಭೆಯು ಹೇಗೆ ಕೊಟ್ಟಿತು (ಅಪೊಸ್ತಲರ ಕೃತ್ಯಗಳು 11:29)?**
3. **ತನ್ನವರ ವರಗಳನ್ನು ದೇವರು ಹೇಗೆ ಸ್ವೀಕರಿಸುವನು (2 ಕೊರಿಂಥ 8:12)?**
4. **ಕೊಡುವಿಕೆಯು ಹೇಗೆ ಮಾಡಲ್ಪಡಬಾರದು? ಅದು ಹೇಗೆ ಮಾಡಲ್ಪಡಬೇಕು (2 ಕೊರಿಂಥ 9:7)?**
   a. ಕೊಡುವವದರಲ್ಲಿ, ಯಾರು ಕಾಣಿಕೆ ಹಾಕಿದರು (ಮಾರ್ಕ 12:41ಬಿ, 44ಎ)?
   b. ಯಾರು ತ್ಯಾಗಮಾಡಿ ಕೊಟ್ಟರು? ಯಾಕೆ (ಮಾರ್ಕ 12:42-44ಬಿ)? "ಹೊಡೆ ಇಲ್ಲವೇ ತಪ್ಪಿಸಿಕೋ" ಎಂಬ ಕೊಡುವಿಕೆಯ ಪದ್ಧತಿಯನ್ನು ಚರ್ಚಿಸಿರಿ.

**ಯಾವಾಗ ಕೊಡಬೇಕು – ಅದರ ಕ್ರಮ**

1. **ಪ್ರತಿಯೊಬ್ಬರು ಯಾವಾಗ ಕೊಡಬೇಕೆಂದು ಪೌಲನು ಹೇಳಿದನು (1 ಕೊರಿಂಥ 16:2)?**

a. ಕ್ರಮಪ್ರಕಾರವಾಗಿ ಪ್ರತಿಯೊಬ್ಬ ಕ್ರೈಸ್ತನು ಕೊಡಬಾರದೋ? ಅದು ಕ್ರಮಬದ್ಧವಾಗಿ ಯಾಕೆ ಕೊಡಲ್ಪಡಬೇಕು (1 ಕೊರಿಂಥ 16:2)?
b. ಪ್ರತಿಯೊಂದು ಕೊಡುಗೆಯು ಉದ್ದೇಶ ಪೂರ್ವಕವಾದದ್ದೂ ವಿಚಾರಪೂರಿತವಾದದ್ದೂ ನಿಶ್ಚಯಿಸಿಕೊಂಡದ್ದೂ ಬುದ್ಧಿವಂತಿಕೆಯಿಂದ ಕೂಡಿದ್ದು ಆಗಿರತಕ್ಕದ್ದೋ?
c. ಪದ್ಧತಿ ಪ್ರಕಾರವಾದ ಕೊಡುಗೆಯು ಹೇಗೆ ಎಲ್ಲಾ ಕೊರತೆಯನ್ನೂ ಚಿಂತೆಗಳನ್ನೂ ತೆಗೆದು ಹಾಕುವುದು?
d. "ಹೊಡೆ ಇಲ್ಲವೇ ತಪ್ಪಿಸಿಕೋ" ಕೊಡುವಿಕೆಯು ಪಾಪಭರಿತವಾದದ್ದಾಗಿರುವದಿಲ್ಲವೇ?

**ಕೊಡುವಿಕೆಯ ಕ್ಷೇತ್ರವು**

1. **ಬಡ ಪರಿಶುದ್ಧರನ್ನು ಹೇಗೆ ಜ್ಞಾಪಿಸಿಕೊಳ್ಳಲ್ಪಡಬಹುದು (ಅಪೊಸ್ತಲರ ಕೃತ್ಯಗಳು 2:45; 4:34, 35)?**
2. **ಫಿಲಿಪ್ಪಿಯ ಸಭೆಯು ಹೇಗೆ ಸಹಾಯಮಾಡಿತು (ಫಿಲಿಪ್ಪಿ 1:1; 4:14-16)?**
3. **ಸಹಾಯಕ್ಕಾಗಿ ಪ್ರಸಂಗಿಗಳು ಹೇಗೆ ಬರುವರು (1 ಕೊರಿಂಥ 9:14; 1 ತಿಮೊಥೆ 5:18)?**
4. **ಕೊರತೆಯುಳ್ಳವರೊಂದಿಗೆ ಸಭೆಯು ಹೇಗೆ ಅನ್ಯೋನ್ಯತೆಯಿಂದ ಇರಬೇಕು (ರೋಮಾಪುರ 12:13)?**
5. **ಇತರರಿಗೆ ಸಹಾಯ ಮಾಡುವ ಕ್ಷೇತ್ರವನ್ನು ಯೇಸುವು ಹೇಗೆ ವಿಸ್ತರಿಸಿದನು (ಲೂಕ 6:30; ಗಲಾತ್ಯ 6:10)?**

**ಉದಾರತೆಯ ಆಶೀರ್ವಾದಗಳು**

1. **ಲೂಕ 6:38 ಬಾಯಿಪಾಠಮಾಡಿರಿ.**
2. **ಪರಲೋಕದಲ್ಲಿ ನಿಧಿಗಳು ಹೇಗೆ ಕೂಡಿಸಿಡಲ್ಪಡುವವು (ಮತ್ತಾಯ 6:20, 21; 1 ತಿಮೊಥೆ 6:17-19)?**
3. **ಯೋಗ್ಯವಾದ ಕೊಡುವಿಕೆಯು ಹೃದಯವನ್ನು ಹೇಗೆ ಶುದ್ಧೀಕರಿಸುವುದು (ಲೂಕ 11:41)?**
4. **ಉದಾರವಾಗಿ ಕೊಡುವವನು ಹೇಗೆ ಆಶೀರ್ವಾದಿಸಲ್ಪಡುವನು (2 ಕೊರಿಂಥ 9:6, 8, 9; ಗಲಾತ್ಯ 6:7, 8)?**
5. **ದೇವರ ಅತಿ ಶ್ರೇಷ್ಠವಾದ ವರ ಯಾವುದು (2 ಕೊರಿಂಥ 8:9)?**
6. **ಕೊಡುವವನ ಮೇಲೆ ಯೇಸುವು ಯಾವ ಆಶೀರ್ವಚನ ಹೇಳಿದನು (ಅಪೊಸ್ತಲರ ಕೃತ್ಯಗಳು 20:35)?**

**ಯೋಚಿಸಲು ವಿಷಯಗಳು**

1. **ಯೋಗ್ಯವಾದ ಸಂಸ್ಥೆಯು ಹಣವಿಲ್ಲದೇ ಯಶಸ್ಸುಹೊಂದಿದರೆ, ಹೇಗೆ ಎಂದು ಹೇಳಿರಿ?**
2. **ಅಷ್ಟನ್ನು ಕೊಡಬೇಕೆಂದು ಪ್ರತಿಯೊಬ್ಬ ಕ್ರೈಸ್ತನು "ಉದ್ದೇಶಿಸ" ಬೇಕೋ?**
3. **"ವಾಗ್ದಾನ ಮಾಡುವ ಪದ್ಧತಿ"ಯ ಬಗ್ಗೆ ಏನು ತಪ್ಪಾಗಿದೆ? ಅದನ್ನು ಚರ್ಚಿಸಿರಿ (2 ಕೊರಿಂಥ 7:5).**
4. **"ನಡಿಸಲು ಖರ್ಚುಗಳನ್ನು ಮಾತ್ರವೇ ಕೊಡುವ" ಸಭೆಯು ದೇವರನ್ನು ಮೆಚ್ಚಿಸಬಹುದೋ?**
5. **ಹಿರಿಯರು ಮತ್ತು ಡೀಕನರು ಪ್ರತಿಯೊಬ್ಬ ಸದಸ್ಯನು ಎಷ್ಟನ್ನು ಕೊಡಲು ಯೋಚಿಸುವರೆಂಬುದನ್ನು ತಿಳಿದು ಕೊಳ್ಳಬಾರದೋ?**

ಸಭೆಯ ಕೆಲಸಕ್ಕೆ ಅದು ಹೇಗೆ ಸಹಾಯ ಮಾಡುವುದು?

**6. ಜಿಪುಣ, ಆಶೆಬುರುಕ ಕ್ರೈಸ್ತನಿಗೆ ಏನಾಗುವುದು (1 ಕೊರಿಂಥ 6:9, 10)?**

**7. ದಶಮಾಂಶವು ಕ್ರೈಸ್ತರ ಮೇಲೆ ಬಂಧಿಸಿರುವದಿಲ್ಲ ಎಂಬುದನ್ನು ಹೇಗೆ ತಿಳಿದುಕೊಳ್ಳುವಿರಿ (ಇಬ್ರಿಯ 7:12)?**

a. ಕ್ರೈಸ್ತ ಕೊಡುವಿಕೆಯ ಪದ್ಧತಿಯನ್ನು ಚರ್ಚಿಸಿರಿ (1 ಕೊರಿಂಥ 16:2).

b. ಹೆಚ್ಚಾದ ಕ್ರೈಸ್ತರು ದಶಮಾಂಶಕ್ಕಿಂತಲೂ ಹೆಚ್ಚಿನದನ್ನು ಯಾಕೆ ಕೊಡುತ್ತಾರೆ (ಇಬ್ರಿಯ 7:11)?

© 2009 Truth for Today